ಉ) ವಿದ್ಯಾರ್ಥಿಗಳಿಗೆ ಓದುವ ಸಲುವಾಗಿ ಇಲ್ಲಿಯವರೆಗೆ ಎಷ್ಟು ರೂಪಾಯಿ ಲೈಬ್ರರಿ ಪುಸ್ತಕ ಒದಗಿಸಲಾಗಿದೆ?

ಊ) ಒಂದು ವೇಳೆ ಲೈಬ್ರರಿ ಪುಸ್ತಕಗಳು ಪೂರೈಸದೇ ಇದ್ದಲ್ಲಿ ಕೂಡಲೇ ಪುಸ್ತಕಗಳನ್ನು ಪೂರೈಸಲು ಕ್ರಮವನ್ನು ಕೈಗೊಳ್ಳಲಾಗಿದೆಯೇ?

ಋ) ಈ ಕಾಲೇಜಿನಲ್ಲಿ ಎಷ್ಟು ಜನ ನೌಕರಿಯವರು ಒಂದು ವೇಳೆ ನೌಕರರ ಕೊರತೆಯಿದ್ದಲ್ಲಿ ಅದನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳುವರೇ? ಹಾಗೂ ಎಷ್ಟು ದಿವಸಗಳಲ್ಲಿ ಈ ಹುದ್ದೆಗಳನ್ನು ತುಂಬಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು):

ಅ) 1984-85

ಆ) ಒದಗಿಸಿಲ್ಲ.

ಇ) ಇಲ್ಲ.

ಈ) ಬೇಡಿಕೆ ಬಂದಾಗ ಪರಿಶೀಲಿಸಲಾಗುವುದು.

ಉ) ಒದಗಿಸಲಾಗಿರುವುದಿಲ್ಲ.

ಋ) ಸದರಿ ಕಾಲೇಜಿನಲ್ಲಿ ಹಾಲಿ 8 ಜನ ಬೋಧನ ವರ್ಗ, ಒಬ್ಬ ಗುಮಾಸ್ತ ಮತ್ತು ಒಬ್ಬ ಜವಾನ ಇದ್ದಾರೆ. ನೌಕರರ ಕೊರತೆ ಇರುವುದಿಲ್ಲ.

ಬೈಲಹೊಂಗಲ ತಾಲ್ಲೂಕಿನ ನೇಸರಗಿಯಲ್ಲಿ ಸೈನ್ಸ್ ವಿಭಾಗದ ಅವಶ್ಯಕತೆ

3450 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ನೇಸರಗಿಯಲ್ಲಿ ಸರ್ಕಾರಿ ಡಿಗ್ರಿ ಕಾಲೇಜಿನಲ್ಲಿ ಸೈನ್ಸ್ ವಿಭಾಗವ ಆವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಯೂನಿವರ್ಸಿಟಿ ಅಫಿಲಿಯೇಷನ್ ಸಲುವಾಗಿ ಯೂನಿವರ್ಸಿಟಿಗೆ ಹಣ ತುಂಬಲು ಯಾವ ಕ್ರಮ ಕೈಗೊಂಡಿದೆ.

ಇ) ಅಲ್ಲಿ ಕಾಲೇಜನ್ನು ಸ್ಥಾಪಿಸಲು ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) ಬಂದಿದೆ.

ಆ) 1992-93ನೇ ಸಾಲಿನಿಂದ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಲು ಉದ್ದೇಶಿಸಿದ್ದು ಇದಕ್ಕಾಗಿ ಅರ್ಜಿಯೊಂದಿಗೆ ಸಂಯೋಜನಾ ಶುಲ್ಕವನ್ನು ವಿಶ್ವವಿದ್ಯಾನಿಲಯಕ್ಕೆ ಕಟ್ಟಬೇಕೆಂದು ಸದರಿ ಕಾಲೇಜಿನ ಪ್ರಿನ್ಸಿಪಾಲರನ್ನು ಕೋರಲಾಗಿದೆ.

ಇ) ಈಗಾಗಲೇ ಅಲ್ಲಿ ಕಲಾ ಮತ್ತು ವಾಣಿಜ್ಯ ಕಾಲೇಜನ್ನು ಸ್ಥಾಪಿಸಲಾಗಿದೆ. ವಿಶ್ವ ವಿದ್ಯಾನಿಲಯದ ಶಿಫಾರಸ್ಸಿನ ಮೇರೆಗೆ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಲಾಗುವುದು.